ಒಕ್ಕಲತನದ ಖಾತೆಯ ಅಮಲದಾರರಿಗೆ ಸೂಚನೆಗಳು.

(೧) ಪ್ರಾರಂಭದ ಸಭೆಯಲ್ಲಿ ಕಲೆಕ್ಟರನು, ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷನ ಆಲೋಚನೆಯನ್ನು ಕೇಳಿಕೊಂಡು, ಕೈಕೊಳ್ಳಲ್ಪಡಬೇಕಾದ ಕೆಲಸದ ಬಗ್ಗೆ ಚರ್ಚೆ ಮಾಡುವಾಗ, ಒಬ್ಬ ಒಕ್ಕಲತನದ ಅಮಲದಾರನು ಅಲ್ಲಿ ಹಾಜರಿರುವದು ಇಷ್ಟವು. ಸಾಧ್ಯವಿದ್ದರೆ, ಈ ಅಮಲದಾರನು ಒಕ್ಕಲತನದ ಡೆಪ್ಯುಟಿ ಡಾಯರೆಕ್ಟರ ನಿರಬೇಕು, ಆದರೆ ಅವನು ತನ್ನ ಕೈಕೆಳಗಿರುವ ಯಾವತ್ತು ಜಿಲ್ಲೆಗಳಲ್ಲಿ ಜರಗುವ ಸಭೆಗಳಿಗೆ ಹಾಜರಾಗಲಿಕ್ಕೆ ಅಸಮರ್ಥನಿರಬಹುದಾದ ಕಾರಣ, ಅವನು ತಾನಾಗಿ ಹಾಜರಾಗಲಿಕ್ಕೆ ಅಸಮರ್ಥನಿರುವ ಸಭೆಗಳಿಗೆ ಹಾಜರಾಗಲಿಕ್ಕೆ ಒಕ್ಕಲತನದ ಇನ್ಸ್ಪೆಕ್ಟರನಿಗಾಗಲಿ ಒಕ್ಕಲತನದ ಓವರಸಿಯರನಿಗಾಗಲಿ ಫರ್ಮಾಯಿಸಬೇಕು.

(೨) ಈ ಪ್ರಾರಂಭದ ಸಭೆಯಲ್ಲಿ ಸದರಿ ಒಕ್ಕಲತನದ ಅಮಲದಾರನು, ವಿಶಿಷ್ಟ ಕ್ಷೇತ್ರಗಳಲ್ಲಿ ಒಕ್ಕಲತನದ ಖಾತೆಯವರು ನಿಜವಾಗಿ ಮಾಡಿದ ಸುಧಾರಣೆಗಳ ಬಗ್ಗೆಯೂ, ಗ್ರಾಮದ ಪುನರ್ರಚನೆಯ ಕೆಲಸದ ಬಗ್ಗೆ ಆರಿಸಲ್ಪಟ್ಟ ಗ್ರಾಮಗಳಲ್ಲಿಯ ಕಾರ್ಯಕ್ರಮದಲ್ಲಿ ಈ ಸುಧಾರಣೆಗಳನ್ನು ಎಷ್ಟರ ಮಟ್ಟಿಗೆ ಸೇರಿಸಬಹುದೆಂಬ ಬಗ್ಗೆಯೂ ಮಾಹಿತಿ ಕೊಟ್ಟು ಸಹಾಯ ಮಾಡಬೇಕು. ಇದಲ್ಲದೆ ಅವನು, ಗ್ರಾಮದ ಪುನರ್ರಚನೆಯಲ್ಲಿ ಸಹಾಯಕವಾಗಬಹುದಾದ ಅನೇಕ ವಿಷಯಗಳನ್ನು ಕುರಿತು ವಿವೇಚನೆ ಮಾಡುವ ಹಸ್ತಪತ್ರಿಕೆಗಳನ್ನು ಖಾತೆಯವರು ಎಷ್ಟರ ಮಟ್ಟಿಗೆ ಈ ಮೊದಲು ಪ್ರಸಿದ್ಧಿಸಿದ್ದಾರೆಂಬದನ್ನು ಹೇಳಬಹುದು, ಗ್ರಾಮದ ಪುನರ್ರಚನೆಯ ಕೆಲಸದ ಸಲುವಾಗಿ ಆರಿಸಲ್ಪಟ್ಟ ಸ್ಥಳಗಳಿಂದ ತೀರ ಸಮೀಪವಿರುವ ಒಕ್ಕಲತನದ ಅಮಲದಾರರ ವಿಳಾಸಗಳನ್ನು ಕೊಡಬಹುದು, ಮತ್ತು ಕೆಲಸವನ್ನು ಪ್ರಾರಂಭಿಸುವ ಮುಂಚೆ ಕೈಕೊಳ್ಳಲ್ಪಡಬಹುದಾದ ಕೆಲಸದ ಒಂದು ಸ್ಥೂಲಮಾನದ ನಿರೀಕ್ಷಣೆ ಯನ್ನು ತಯಾರಿಸುವ ಬಗ್ಗೆ ಸಹಾಯ ಮಾಡಬಹುದು.

(೩) ಒಕ್ಕಲತನದ ಡೆಪ್ಯುಟಿ ಡಾಯರೆಕ್ಟರರು ತಮ್ಮ ನೆರೆಯಲ್ಲಿರುವ ಮುಲ್ಕಿ ಖಾತೆಯ ಯಾವತ್ತು ಅಮಲದಾರರೊಡನೆ ನಿಕಟಸಂಬಂಧವನ್ನಿಡಬೇಕು, ಮತ್ತು ಅವರು, ಮುಲ್ಕೀ ಅಮಲದಾರನ ಕ್ಷೇತ್ರದಲ್ಲಿರುವ ಗ್ರಾಮದ ಪುನರ್ರಚನೆಯ ಯಾವವೇ ಯೋಜನೆಗಳ ಸಂಬಂಧದಿಂದ ಮಾಹಿತಿಯನ್ನು ಅಥವಾ ಆಲೋಚನೆ ಯನ್ನು ಕೊಟ್ಟು ಶಕ್ಯವಿದ್ದ ಸಹಾಯವನ್ನು ಮಾಡಬೇಕು.

(೪) ಒಕ್ಕಲತನದ ಡೆಪ್ಯುಟಿ ಡಾಯರೆಕ್ಟರರಿಗೆ, ಒಕ್ಕಲತನದ ಇನ್ಸ್ಪೆಕ್ಟರರಿಗೆ ಮತ್ತು ಓವರಸೀಯರರಿಗೆ ತಮ್ಮ ತಮ್ಮ ಪ್ರದೇಶಗಳಲ್ಲಿರುವ ಯಾವತ್ತು ಗ್ರಾಮ ಸುಧಾರಣೆಯ ಯೋಜನೆಗಳ ವಿಷಯದಲ್ಲಿ ಸಂಪೂರ್ಣವಾದ ಮಾಹಿತಿ ಇರಬೇಕು, ಮತ್ತು ಸಂಬಂಧವಿರುವ ಗ್ರಾಮಗಳಲ್ಲಿರುವ ಮುಖ್ಯ ಕೆಲಸಗಾರರ ಪರಿಚಯವು ತಮಗೆ ಆಗುವಂತೆ ಅವರು ಪ್ರಯತ್ನ ಮಾಡಬೇಕು.

(೫) ಸದರಿ ಚಳವಳಿಯಲ್ಲಿ ಸಹಾಯಕವಾಗಬಹುದಾದ ಮತ್ತು ಗ್ರಾಮ ಸುಧಾರಣೆಯ ಯಾವದೇ ಸ್ವರೂಪಕ್ಕೆ ಸಂಬಂಧಿಸುವ ಹಸ್ತಪತ್ರಿಕೆಗಳ ಮಸೂದೆ ಗಳನ್ನು ಒಕ್ಕಲತನದ ಡೆಪ್ಯುಟಿ ಡಾಯರೆಕ್ಟರರು ಒಕ್ಕಲತನದ ಡಾಯರೆಕ್ಟರನ ಕಡೆಗೆ ಕಳುಹಿಸಿಕೊಡಬೇಕೆಂದು ಅವರಿಗೆ ವಿನಂತಿಯದೆ.

(೬) ಹೆಡ್‌ಕ್ವಾರ್ಟರಿನ ಶಾಸ್ತ್ರೀಯ ತಜ್ಞರು, ತಾವು ಫಿರತಿಯ ಮೇಲಿ ದ್ದಾಗ, ತಮ್ಮ ಫಿರತಿಯ ಕಾರ್ಯಕ್ರಮವನ್ನು ಅಯೋಗ್ಯವಾಗಿ ಬದಲಿಸದೆ ಅಥವಾ

ತಮ್ಮ ಫಿರತಿಯ ಭತ್ತೆಯನ್ನು ಬೆಳಿಸದೆ, ಗ್ರಾಮಸುಧಾರಣೆಯ ಕಾರ್ಯವನ್ನು ಕೈಕೊಂಡಿರುವ ಯಾವವಾದರೂ ಗ್ರಾಮಗಳಿಗೆ ಭೆಟ್ಟಿ ಕೊಡಬೇಕೆಂದು ಅವರಿಗೆ ವಿನಂತಿ ಮಾಡಲಾಗಿದೆ. ಈ ಗ್ರಾಮಗಳಲ್ಲಿ ತಮ್ಮ ವಿಶಿಷ್ಟ ದಿಶೆಯಿಂದ ಏನೇನು ಮಾಡಲಿಕ್ಕೆ ಬರುವಂತಿರುವದೆಂಬ ಬಗ್ಗೆ ಅಥವಾ ಕೆಲಸದ ಪ್ರಗತಿಯ ಬಗ್ಗೆ ಅವರು ಬರೆದ ಶೆರಾಗಳನ್ನು, ಆ ಗ್ರಾಮವು ಯಾರ ಕ್ಷೇತ್ರದಲ್ಲಿರುವದೋ ಆ ಕ್ಷೇತ್ರದ ತಾಬೆಯುಳ್ಳ ಒಕ್ಕುಲತನದ ಡೆಪ್ಯುಟಿ ಡಾಯರೆಕ್ಟರನ ಕಡೆಗೆ, ಅವನು ಈ ಶೆರಾಗಳ ಉಪಯೋಗವನ್ನು ತನ್ನ ಮರ್ಜಿಯ ಮೇರೆಗೆ ಮಾಡಿಕೊಳ್ಳುವ ಬಗ್ಗೆ, ಕಳುಹಿಸಿಕೊಡ ಬೇಕು.

(೭) ಒಕ್ಕುಲತನದ ಡೆಪ್ಯುಟಿ ಡಾಯರೆಕ್ಟರರು ತಮ್ಮ ತಮ್ಮ ಅಧಿಕಾರಸೀಮೆಯಲ್ಲಿ ಗ್ರಾಮದ ಪುನರ್ರಚನೆಯ ಬಗ್ಗೆ ವಿಶಿಷ್ಟವಾಗಿ ಯೋಗ್ಯವಿರುವ ವಿಷಯಗಳಲ್ಲಿ ಶಿಕ್ಷಣ ಕೊಡುವ ವರ್ಗಗಳನ್ನು ಪ್ರಾರಂಭಿಸುವದರ ಶಕ್ಯತೆಯನ್ನು ಕುರಿತು ವಿಚಾರ ಮಾಡಬೇಕೆಂದು ಅವರಿಗೆ ವಿನಂತಿ ಮಾಡಲಾಗಿದೆ. ಇಂಥ ಯಾವದೇ ವರ್ಗವು ಒಂದು ವಾರಕ್ಕಿಂತ ಹೆಚ್ಚು ಕಾಲದ ವರೆಗೆ ನಡೆಯಬಾರದು ಮತ್ತು ಅದರಲ್ಲಿಯ ಶಿಕ್ಷಣವು ಪೂರ್ಣ ವ್ಯಾವಹಾರಿಕವಾಗಿರಬೇಕು.